**ಚಾಸಾ-5**

**ಪ್ರಾಸಾ-4**

**<u>ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.</u>**

**ಸಾಕ್ಷಿದಾರನ ಹೆಸರುಃ ಚಂದ್ರಕಾಂತ**

**ತಂದೆಯ ಹೆಸರುಃ ಬಸವಣೆಪ್ಪ ಇಟಗಿ**

**ವಯಸ್ಸುಃ** 63 **ವರ್ಷ**

**ಉದ್ಯೋಗಃ ನಿವೃತ್ತ ನೌಕರ**

**ವಾಸಸ್ಥಳಃ ಬೆಳಗಾವಿ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿ. **24.01.2023.**

<u>ಮುಖ್ಯ ವಿಚಾರಣೆಃ</u> ಮಾನ್ಯ ಸಸಅ ರವರಿಂದ

ದಿಃ **22.05.2018** ರಂದು ಪೋಲಿಸರು ನಮ್ಮ ಕಚೇರಿಗೆ ಬಂದು ಕೆಲವು ವಸ್ತುಗಳನ್ನು ಜಪ್ತಿ ಮಾಡುವುದಿದೆ ನೀವು ಪಂಚರಾಗಿ ಬರಬೇಕು ಎಂದು ನನಗೆ ನೊಟಿಸ ನೀಡಿದ್ದರು. ಸರಿದ ನೊಟಿಸ್ಸನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**5** ಎಂದು , ಸಾಕ್ಷಿಯ ಸಹಿಯನ್ನು ನಿಪಿ.**5(**ಎ**)** ಎಂದು ಗುರುತಿಸಲಾಯಿತು. ಹಾಗೂ ಅಲ್ಲಿಂದ ಅದೇ ದಿನ ಪೋಲಿಸ ಠಾಣೆ ನನ್ನನ್ನು ಕರೆದುಕೊಂಡು ಬಂದು ಅಲ್ಲಿ ನನಗೆ **1** ಮತ್ತು **2** ನೇ ಆರೋಪಿಯನ್ನು ತೋರಿಸಿದರು ಆಗ ಸದರಿ ಆರೋಪಿತರು ತಮ್ಮ ಮನೆಯಲ್ಲಿ ಕೆಲವು ದಾಖಲಾತಿಗಳನ್ನು ಇಟ್ಟುಕೊಂಡಿದ್ದು ತಮ್ಮ ಜೊತೆ ಬಂದರೇ ತೊರಿಸುತ್ತೇನೆ ಎಂದು ಪೋಲಿಸರಿಗೆ ಹೇಳಿದರು.

ಆದ್ದರಿಂದ ನಾನು , ಚಾಸಾ**4** ಮತ್ತು ಪೋಲಿಸರು **1** ಮತ್ತು **2** ನೇ ಆರೋಪಿತರ ಮನೆಗೆ ಹೋದೆವು. ಸದರಿಯವರ ಮನೆ ಧಾರವಾಡ ಶಹರದ ಮಾಳಾಪೂರದಲ್ಲಿನ ರಾಜ ನಗರದಲ್ಲಿ ಇತ್ತು. ಸದರಿ ಮನೆ ಆರೋಪಿತರ ಬಾಡಿಗೆ ಮನೆಯಾಗಿತ್ತು. ಸದರಿ ಮನೆಯನ್ನು ಆರೋಪಿತರು ತೋರಿಸಿ ಸದರಿ ಮನೆಯಲ್ಲಿದ್ದ ಒಂದು ನೋಕಿಯಾ ಕಂಪನಿಯ ಕೀ ಪ್ಯಾಡ್ ಮೊಬೈಲ್ ನೀಡಿದರು ಅದರಲ್ಲಿ ವೊಡಾಫೊನ ಕಂಪನಿಯ **4** ಜಿ ಸಿಮ್ ಇತ್ತು. ಅದನ್ನು ಹಾಗೂ **190** ಪರೀಕ್ಷಾರ್ಥಿಗಳ ಹೆಸರು ಮತ್ತು ಮೊಬೈಲ್ ನಂಬರ ಹಾಗೂ ಕೈಯಿಂದ ಬರೆದ ಪರೀಕ್ಷಾರ್ಥಿಗಳ ಹೆಸರು , ಮೊಬೈಲ್ ನಂಬರ ಹಾಗೂ ಬ್ಯಾಂಚ್ ನಂಬರವುಳ್ಳ ಪಟ್ಟಿಯನ್ನು ಪೋಲಿಸರು ಅಮಾನತುಪಡಿಸಿಕೊಂಡರು. ಸದರಿ

**ಚಾಸಾ-5**

**ಪ್ರಾಸಾ-4**

ವಸ್ತುಗಳನ್ನು ಸಂಜೆ **5.30** ರಿಂದದ **6.30** ವರೆಗೆ ಪೋಲಿಸರು ಪಂಚನಾಮೆ ಜರುಗಿಸುವುದರ ಮೂಲಕ ಅಮಾನತುಪಡಿಸಿಕೊಂಡರು. ಸದರಿ ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**6** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.6(ಎ)** ಎಂದು ಗುರುತಿಸಲಾಯಿತು. ಹಾಗೂ ಸದರಿ ಸಮಯದಲ್ಲಿ ಪೋಲಿಸರು ಫೋಟೊ ಗಳನ್ನು ತೆಗೆದಿರುತ್ತಾರೆ. ಸದರಿ ಸಮಯದ ಮೂರು ಫೋಟೊ ಗಳನ್ನು ಸಾಕ್ಷ ನೊಡಿ ಗುರುತಿಸಿದ್ದು ಅವುಗಳನ್ನು **ನಿಪಿ.7** ರಿಂದ **9** ಎಂದು ಗುರುತಿಸಲಾಯಿತು.

ಸದರಿ ದಿನ ಪೋಲಿಸರು ಅಮಾನತುಪಡಿಸಿಕೊಂಡಿದ್ದ ಕೀ ಪ್ಯಾಡ ಮೊಬೈಲ್ ನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ಎಂಓ 1** ಎಂದು ಗುರುತಿಸಲಾಯಿತು. ಹಾಗೂ ಪರೀಕ್ಷಾರ್ಥಿಗಳ ಹೆಸರು, ಮೊಬೈಲ್ ನಂಬರ ಹಾಗೂ ಬ್ಯಾಚ್ ನಂಬರವುಳ್ಳ ಕೈರಬಹದ ಪಟ್ಟಿಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ಎಂಓ 2** ಎಂದು ಗುರುತಿಸಲಾಯಿತು. ಹಾಗೂ ಪರೀಕ್ಷಾರ್ಥಿಗಳ ಹೆಸರು , ಮೊಬೈಲ್ ನಂಬರವುಳ್ಳ ಟೈಪಡ್ ಪಟ್ಟಿಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ಎಂಓ 3** ಎಂದು ಗುರುತಿಸಲಾಯಿತು. ಸದರಿ ಕೀ ಪ್ಯಾಡ್ ಮೊಬೈಲ್ ನಲ್ಲಿ ಇದ್ದ ಹಾಗೂ ಸದರಿ ದಿನ ಪೋಲಿಸರು ಅಮಾನತುಪಡಿಸಿಕೊಂಡ ಸಿಮ್ ನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ಎಂಓ 4** ಎಂದು ಗುರುತಿಸಲಾಯಿತು. ಸದರಿ ದಿನ ಸದರಿ ಈ ಮೇಲೆ ಎಂಓ **1** ರಿಂದ **4** ವಸ್ತುಗಳನ್ನು ಪೋಲಿಸರು ಈ ದಿನ ನ್ಯಾಯಾಲಯದ ಮುಂದೆ ಇರುವ **1** ಮತ್ತು **2** ನೇ ಆರೋಪಿತರಿಂದಲೇ ಅಮಾನತುಪಡಿಸಿಕೊಳ್ಳಲಾಗಿತ್ತು.

( ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಗಿದೆ .)

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**

**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಧಾರವಾಡ.